ದಿನಕ್ಕೊಂದು ಬಾರಿಯಾದರೂ ನಮಗೆ ನೀರು ಬರುವುದಿಲ್ಲ, ಆದ್ದರಿಂದ ನಮಗೆ ಸೆಪರೇಟ್ ಆಗಿ ಒಂದು ಲೈನ್ ಕೊಡಿಸಲು, ತಾವು ಹೇಗಾದರೂ ಮಾಡಿ ಕಾಸ್ಟ್ ಕಡಿಮೆ ಮಾಡಿ, ಮುನಿಸಿಪಾಲಿಟಿಯಿಂದ ಕಡೆಯಿಂದ ದುಡ್ಡನ್ನು ತೆಗೆದುಕೊಂಡು ಮಾಡಬೇಕು, ಇಲ್ಲವಾದರೆ ಮುನಿಸಿಪಾಲಿಟಿಗೆ ಗ್ರಾಂಟ್ ಆದರೂ ಸರ್ಕಾರದಿಂದ ಕೊಡಿಸುವ ವ್ಯವಸ್ಥೆಯಾಗಬೇಕು.

ಶ್ರೀ ಶರಣಬಸಪ್ಪ ದರ್ಶಾನಾಪುರ್: ಮಾನ್ಯ ಸದಸ್ಯರ ಜೊತೆಯಲ್ಲಿ ಚರ್ಚೆ ಮಾಡಿ ಏನು ಅನುಕೂಲವಾಗುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡಿಕೊಡುತ್ತೇವೆ.

ವಿಷಯ: ಭಟ್ಕಳ ತಾಲ್ಲೂಕಿನ ಕಡುವಿನ ಕಟ್ಟಿಯ ಚಿಕ್ಕ ಅಣೆಕಟ್ಟಿನ ದುರಸ್ಥಿ ಕಾರ್ಯ

217 (1490)

ಶ್ರೀ ಶಿವಾನಂದ ನಾಯ್ಕ (ಭಟ್ಕಳ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ತಾಲ್ಲೂಕಿನ ಕಡವಿನ ಕಟ್ಟಿಯ ಚಿಕ್ಕ ಅಣೆಕಟ್ಟಿನ ರಿಪೇರಿಗೆ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ, ಹಾಗೂ ಎಷ್ಟು ಹಣ ಖರ್ಚಾಗಿದೆ?

ಆ) ಈ ಕೆಲಸ ಯಾವ ಹಂತದಲ್ಲಿದೆ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) ಭಟ್ಕಳ ತಾಲ್ಲೂಕಿನ ಕಡವಿನ ಕಟ್ಟಿಯ ಚಿಕ್ಕ ಅಣೆಕಟ್ಟಿನ ರಿಪೇರಿಗೆ ಸರ್ಕಾರದಿಂದ ಬಿಡುಗಡೆಯಾದ ವರ್ಷವಾರು ಹಣ ಹಾಗೂ ಖರ್ಚು ವಿವರ ಈ ಕೆಳಗಿನಂತಿದೆ.

ವರ್ಷ	ಬಿಡುಗಡೆಯಾದ ಹಣ (ಲಕ್ಷ ರೂ.)	ಖರ್ಚಾದ ಹಣ ಲಕ್ಷ ರೂ.
1994-95	2.20	0.20
1995-96	4.40	0. 19
1996-97	2.00	0.68
1997-98	1. 50	2.40

ಆ) ಈ ಡ್ಯಾಂನ ಮೇಲ್ಭಾಗದಲ್ಲಿ ಸೋರುವಿಕೆ ತಡೆಗಟ್ಟುವ ಸಲುವಾಗಿ 190.50 ಮಿ.

ಉದ್ದಕ್ಕೆ ಹೊದಿಕೆಗೋಡೆ (ಸ್ಕಿನ್ ವಾಲ್) ಮಾಡಬೇಕಾಗಿರುತ್ತದೆ. ಆ ಪೈಕಿ ಈಗಾಗಲೇ 68 ಮಿ. ಕೆಲಸ ಮುಗಿದಿರುತ್ತದೆ.

ಈ ಹೊದಿಕೆ ಗೋಡೆ ಹಾಕುವ ಸಲುವಾಗಿ ಅವಶ್ಯಕವಾದ ರಿಂಗ್‌ಬಂಡ್ ಮತ್ತು ಡಿವಾಟರಿಂಗ್ ಇವುಗಳನ್ನು ಇಲಾಖಾ ವತಿಯಿಂದ ಮಾಡಲಾಗುತ್ತಿದೆ. ಬಾಕಿ ಉಳಿದ ಕೆಲಸವನ್ನು ಮಳೆಗಾಲದ ಪ್ರಾರಂಭದೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಶಿವಾನಂದ ನಾಯ್ಕ: ಕಳೆದ ನಾಲ್ಕು ವರ್ಷಗಳಿಂದ ಈ ಇಲಾಖೆಯವರು ರೈತರನ್ನು ಬೀದಿ ಪಾಲು ಮಾಡಿರುವುದರಿಂದ ಇದು ಒಂದು ಕಣ್ಣೀರನ ಕಥೆಯಾಗಿದೆ. ಏಕೆ ನಾನು ಈ ಮಾತು ಹೇಳುತ್ತಿದ್ದೇನೆಂದರೆ, ಪ್ರತಿವರ್ಷ ಇವರು ರಿಪೇರಿ ಮಾಡಬೇಕೆಂದು ನೀರು ನಿಲ್ಲಿಸುತ್ತಾರೆ. ಆದರೆ ರೀಪೇರಿ ಮಾತ್ರ ಆಗುತ್ತಿಲ್ಲ. ಇದರಿಂದಾಗಿ ರೈತರ ಬೆಳೆ ಕೂಡ ಹಾಳಾಗುತ್ತಿದೆ. ಸುಮಾರು ನಾಲ್ಕು ವರ್ಷದಿಂದ ಈ ಕಾರ್ಯ ಮಾಡುತ್ತಿದ್ದರೂ ಕಳೆದ ಮೂರು ವರ್ಷಗಳಲ್ಲಿ ಹತ್ತು ಲಕ್ಷ ರೂ.ಗಳ ಈ ರಿಪೇರಿ ಕೆಲಸವನ್ನು, ಕೇವಲ ಒಂದು ಲಕ್ಷ ಮೂವತ್ತೇಳು ಸಾವಿರ ರೂ.ಗಳ ಕೆಲಸ ಮಾತ್ರ ಮಾಡಿದ್ದಾರೆ. ಆದರೆ ಮಾನ್ಯ ಸಚಿವರು ''ಬಾಕಿ ಉಳಿದ ಕೆಲಸವನ್ನು ಮಳೆಗಾಲ ಪ್ರಾರಂಭದೊಳಗೆ ಪೂರ್ಣಗೊಳಿಸುತ್ತೇವೆ'' ಎಂದು ಉತ್ತರಿಸಿದ್ದಾರೆ. ಈ ಕೆಲಸವನ್ನು ಯಾವ ರೀತಿಯಲ್ಲಿ ಪೂರ್ಣಗೊಳಿಸುತ್ತೀರಿ ಹಾಗೂ ಎಷ್ಟು ದಿನಗಳಲ್ಲಿ ಪೂರ್ಣಗೊಳಿಸುತ್ತೀರಿ ಅಥವಾ ಇದೇ ರೀತಿ ರೈತರನ್ನು ಬೀದಿ ಪಾಲು ಮಾಡುತ್ತೀರಾ? ಇವೆಲ್ಲಕ್ಕೂ ತಾವು ಸ್ಪಷ್ಟವಾದ ಉತ್ತರವನ್ನು ಕೊಡಬೇಕು.

ಶ್ರೀ ತಿಪ್ಪೇಸ್ವಾಮಿ: ಈಗಾಗಲೇ ಅಲ್ಲಿ ಡ್ಯಾಂ ಕಟ್ಟುತ್ತಿದ್ದೇವೆ. ಡ್ಯಾಂ ನೀರು ಸೋರಿ ಹೋಗದಂತೆ ಈಗಾಗಲೇ ಸುಮಾರು 68 ಮೀಟರ್ ಉದ್ದದ ಹೊದಿಕೆ ಗೋಡೆಯನ್ನು ಹಾಕುವ ಕೆಲಸ ಪೂರ್ಣವಾಗಿದೆ. ನೀರು ಹರಿಯುತ್ತಿರುವ ಜಾಗದಲ್ಲಿ ನೀರು ಹೊರಬರದಂತೆ ಒಂದು ವಾಟರ್ ವಾಲ್‌ನ್ನು ಹಾಕಿಕೊಂಡಿದ್ದೇವೆ. ನಂತರ ಆ ಗುಂಡಿಯಲ್ಲಿರುವ ನೀರನ್ನೂ ಇಲಾಖಾವತಿಯಿಂದ ತೆಗೆಯುತ್ತಿದ್ದೇವೆ. ಮಾನ್ಯ ಸದಸ್ಯರ ಕಳಕಳಿಯಂತೆ, ನಾನು ಈಗಾಗಲೇ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಆದಷ್ಟು ಬೇಗ ಈ ಕೆಲಸವನ್ನು ಮುಗಿಸಬೇಕೆಂದೂ ಕೂಡ ಹೇಳಿದ್ದೇನೆ. ಜೊತೆಗೆ ಇದಕ್ಕಾಗಿ ನಾವು ಈಗಾಗಲೇ ಹಣವನ್ನು ಕೂಡ ಇಟ್ಟಿದ್ದೇವೆ. ಹಣಕಾಸಿನ ತೊಂದರೆ ನಮಗೇನೂ ಇಲ್ಲ ಈಗಾಗಲೇ ಕೆಲಸ ಪ್ರಾರಂಭಿಸಿರುವುದರಿಂದ, ಆದಷ್ಟು ಕೆಲಸ ಮುಗಿಸುತ್ತೇವೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಶಿವಾನಂದ ನಾಯಕ್: ಈ ವರ್ಷ ಮುಗಿಸುತ್ತೀರಾ?

ಶ್ರೀ ತಿಪ್ಪೇಸ್ವಾಮಿ: ಮುಗಿಸುತ್ತೇವೆ.